# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 411 |
| 2 | ಸದಸ್ಯರ ಹೆಸರು | : | ಶ್ರೀ ಯು.ಬಿ. ವೆಂಕಟೇಶ್ (ನಾಮ ನಿರ್ದೇಶನ ಹೊಂದಿದವರು) |
| 3 | ಉತ್ತರಿಸುವ ದಿನಾಂಕ | : | 16-02-2023 |
| 4 | ಉತ್ತರಿಸುವವರು | : | ಮುಖ್ಯಮಂತ್ರಿಗಳು |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರದಲ್ಲಿ ಕಳೆದ ಮೂರು ವರ್ಷಗಳಲ್ಲಿ ರಸ್ತೆ ಗುಂಡಿಗಳಿಂದ ಅಪಘಾತಕ್ಕೊಳಗಾಗಿ ಮೃತಪಟ್ಟವರ ಸಂಖ್ಯೆ ಎಷ್ಟು; (ಪೂರ್ಣ ವಿವರಗಳನ್ನು ನೀಡುವುದು). | ಬೆಂಗಳೂರು ನಗರದಲ್ಲಿ ಕಳೆದ 03 ವರ್ಷಗಳಲ್ಲಿ ರಸ್ತೆ ಗುಂಡಿಗಳಿಂದ ಅಪಘಾತಕ್ಕೆ ಒಳಗಾಗಿ ಮೃತಪಟ್ಟಿರುವ ಬಗ್ಗೆ ಮಾಧ್ಯಮಗಳಲ್ಲಿ ವರದಿಯಾಗಿದ್ದು, ಸದರಿ ಪ್ರಕರಣಗಳನ್ನು ಬೆಂಗಳೂರು ನಗರದ ಪೋಲಿಸ್ ಇಲಾಖೆಯಿಂದ ತನಿಖೆ ನಡೆಸಲಾಗುತ್ತಿದೆ. ರಸ್ತೆ ಗುಂಡಿಗಳ ಕಾರಣದಿಂದಾಗಿಯೇ ಅಪಘಾತವಾಗಿ ಮೃತಪಟ್ಟ ಬಗ್ಗೆ ತನಿಖೆ ನಡೆಯುತ್ತಿರುತ್ತದೆ. |
| ಆ) | ಬೆಂಗಳೂರು ನಗರದ ರಸ್ತೆ ಗುಂಡಿಗಳನ್ನು ಮುಚ್ಚಲು ಕಳೆದ ಮೂರು ವರ್ಷಗಳಿಂದ ನೀಡಿರುವ ಅನುದಾನ ಎಷ್ಟು; ಖರ್ಚಾಗಿರುವ ಮೊತ್ತವೆಷ್ಟು; (ವಿಧಾನ ಸಭಾ ಕ್ಷೇತ್ರವಾರು ವಿವರವನ್ನು ನೀಡುವುದು). | ಬೆಂಗಳೂರು ನಗರದ ರಸ್ತೆ ಗುಂಡಿಗಳನ್ನು ಮುಚ್ಚಲು ಕಳೆದ ಮೂರು ವರ್ಷಗಳಿಂದ ನೀಡಿರುವ ಅನುದಾನ ಮತ್ತು ವೆಚ್ಚದ ವಿವರವನ್ನು **ಅನುಬಂಧ** ದಲ್ಲಿ ನೀಡಲಾಗಿದೆ. |
| ಇ) | ಕಳೆದ ಮೂರು ವರ್ಷಗಳಿಂದ ರಸ್ತೆ ಗುಂಡಿಗಳಿಂದ ಮೃತರಾದವರ ಕುಟುಂಬ ವರ್ಗದವರಿಗೆ ನೀಡಿರುವ ಪರಿಹಾರ ಎಷ್ಟು; | ಸರ್ಕಾರವು ಸದರಿ ವಿಷಯವನ್ನು ಗಂಭೀರವಾಗಿ ಪರಿಗಣಿಸಿದ್ದು, ರಸ್ತೆ ಗುಂಡಿಗಳಿಂದ ವಾಹನ ಸವಾರರು ಪ್ರಾಣ ಕಳೆದುಕೊಂಡಿರುವ ದೂರಿನ ಪ್ರಕರಣಗಳು ತನಿಖಾ ಹಂತದಲ್ಲಿರುವ ಹಿನ್ನೆಲೆಯಲ್ಲಿ, ಈ ಸಂಬಂಧ ಇಲ್ಲಿಯವರೆಗೂ ಯಾವುದೇ ಕುಟುಂಬ ವರ್ಗದವರಿಗೆ ಪರಿಹಾರ ವಿತರಣೆಯಾಗಿರುವುದಿಲ್ಲ. |
| ಈ) | ರಸ್ತೆ ಗುಂಡಿಗಳ ನಿರ್ವಹಣೆಯಲ್ಲಿ ಸರ್ಕಾರ ಪದೇ ಪದೇ ವಿಫಲವಾಗುತ್ತಿರುವುದಕ್ಕೆ ಕಾರಣಗಳೇನು; | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 2019-2020ರ ನಂತರ ಬೆಂಗಳೂರು ನಗರವು ಅತ್ಯಂತ ವೇಗವಾಗಿ ಅಭಿವೃದ್ಧಿ ಹೊಂದುತ್ತಿದ್ದು, ಬೆಂಗಳೂರು ಜಲಮಂಡಳಿ ವತಿಯಿಂದ 110 ಹಳ್ಳಿಗಳ ಪ್ರದೇಶದಲ್ಲಿ ಅಂದರೆ 225 ಚದರ ಕಿಲೋ ಮೀಟರ್‌ನಲ್ಲಿ ಕುಡಿಯುವ ನೀರು ಮತ್ತು ಒಳಚರಂಡಿ ವ್ಯವಸ್ಥೆ ಕಲ್ಪಿಸುವ ಯೋಜನೆಯನ್ನು ಹಮ್ಮಿಕೊಂಡಿದ್ದು, ಸುಮಾರು 1600 ಕಿಲೋಮೀಟರ್ ಉದ್ದದ ರಸ್ತೆಯನ್ನು ಅಗೆಯಲಾಗಿರುತ್ತದೆ. |

ಮುಂದುವರೆದು, ಬೆಸ್ಕಾಂ ಸಂಸ್ಥೆಯು 6000 ಕಿಲೋ ಮೀಟರ್ ಉದ್ದದ 11 ಕೆ.ವಿ. ಎತ್ತರದ ತಂತಿಗಳನ್ನು ಭೂಗತ ಕೇಬಲ್‌ಗಳಾಗಿ ಪರಿವರ್ತಿಸುತ್ತಿದ್ದು, ಈ ಯೋಜನೆಗಾಗಿ ನಗರದ ಒಳಭಾಗದಲ್ಲಿ ರಸ್ತೆಯನ್ನು ಅಗೆಯಲಾಗಿರುತ್ತದೆ. ಕೆ.ಪಿ.ಟಿ.ಸಿ.ಎಲ್. ಸಂಸ್ಥೆಯಿಂದ ಮೆಟ್ರೋ ಕಾಮಗಾರಿಗಾಗಿ ಮತ್ತು ಬೆಂಗಳೂರು ನಗರದ ಪ್ರದೇಶದಲ್ಲಿ ವಿದ್ಯುತ್ ಪ್ರಸರಣಕ್ಕಾಗಿ ಹತ್ತು ಹಲವಾರು ಯೋಜನೆಗಳನ್ನು ಹಮ್ಮಿಕೊಂಡಿದ್ದು, ರಸ್ತೆ ಅಗೆತವನ್ನು ಅನಿವಾರ್ಯವಾಗಿ ಕೈಗೆತ್ತಿಕೊಂಡಿರುತ್ತದೆ.

ಬೆಂಗಳೂರು ನಗರದಾದ್ಯಂತ ಗೇಲ್ ಇಂಡಿಯಾ ಲಿಮಿಟೆಡ್ ಸಂಸ್ಥೆಯು ಮನೆ ಮನೆಗೆ ಗ್ಯಾಸ್ ಸಂಪರ್ಕ ಒದಗಿಸುತ್ತಿದ್ದು, ಈ ಯೋಜನೆಯನ್ನು ಜಾರಿಗೆ ತರಲು ರಸ್ತೆಯನ್ನು ಅಗೆಯಲಾಗುತ್ತಿರುತ್ತದೆ. 2020-2021 ಮತ್ತು 2021-22ರಲ್ಲಿ ಉಂಟಾದ ಕೋವಿಡ್ ಸಾಂಕ್ರಾಮಿಕದಿಂದಾಗಿ "Work from home and online Classes" ಪ್ರಾರಂಭವಾದ ಹಿನ್ನಲೆಯಲ್ಲಿ ಅಂತರ್‌ಜಾಲದ ಅವಶ್ಯಕತೆಗಳು ತೀವ್ರವಾಗಿ ಹೆಚ್ಚಾಗಿದ್ದು, ಓ.ಎಫ್.ಸಿ. ಕೇಬಲ್ ಅಳವಡಿಕೆಯು ಗರಿಷ್ಠ ಮಟ್ಟದಲ್ಲಿ ಹೆಚ್ಚಾಗಿ ರಸ್ತೆಗಳ ಅಗೆತವು ತೀವ್ರವಾಗಿರುತ್ತದೆ. ಈ ಹಿನ್ನೆಲೆಯಲ್ಲಿ, 2019 ರಿಂದ ರಸ್ತೆಯ ಮೇಲ್ಮೈಗೆ ತೀವ್ರವಾಗಿ ಧಕ್ಕೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಆದರೆ ಮೇಲ್ಕಂಡ ಯೋಜನೆಗಳು ನಗರದ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾಗಿರುತ್ತದೆ.

2021-2022 ಮತ್ತು 2022-23ರಲ್ಲಿ ಬಿದ್ದಂತಹ ಭಾರಿ ಮತ್ತು ಅಕಾಲಿಕ ಮಳೆಯಿಂದಾಗಿ ರಸ್ತೆಗಳ ಕತ್ತರಿಸಿದ ಭಾಗಗಳನ್ನು ಪುನರ್ ಸ್ಥಾಪನೆ ಮಾಡಲು ಅಡಚಣೆ ಉಂಟಾಗಿದ್ದು ಮತ್ತು ರಸ್ತೆಯ ಕೆಲವು ಭಾಗಗಳು ಮಳೆಯಿಂದಾಗಿ ತೀವ್ರವಾಗಿ ಹಾನಿ ಉಂಟಾಗಿ ರಸ್ತೆಯಲ್ಲಿ ಗುಂಡಿಗಳು ನಿರ್ಮಾಣವಾಗಿರುತ್ತವೆ. ಮಳೆಯ ತೀವ್ರತೆಯಿಂದಾಗಿ ಬೆಂಗಳೂರು ಜಲ ಮಂಡಳಿಯ ಮ್ಯಾನ್ ಹೋಲ್‌ಗಳು ಉಕ್ಕಿಹರಿದು ರಸ್ತೆ ಮೇಲ್ಮೈಗೆ ಧಕ್ಕೆ ಉಂಟಾಗಿರುವುದು ಸಹ ಕಂಡುಬಂದಿರುತ್ತದೆ.

ಪ್ರಸ್ತುತ, ಸರ್ಕಾರವು "ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ ಯೋಜನೆ" ಯಡಿಯಲ್ಲಿ ರಸ್ತೆ ನಿರ್ಮಾಣಕ್ಕಾಗಿ ಮತ್ತು ರಸ್ತೆ ಮೇಲ್ಮೈನ ದುರಸ್ಥಿಗಾಗಿ ಅತ್ಯಧಿಕ ಅನುದಾನವನ್ನು ಮೀಸಲಿರಿಸಲಾಗಿದ್ದು, ಸುಮಾರು ರೂ.4000.00 ಕೋಟಿಗಳನ್ನು ರಸ್ತೆ ಮೇಲ್ಮೈ ಅಭಿವೃದ್ಧಿಗಾಗಿ ಮೀಸಲಿರಿಸಲಾಗಿದೆ. ಈ ಯೋಜನೆಯಡಿಯಲ್ಲಿ ಬೆಂಗಳೂರು ನಗರದ ಪ್ರಮುಖ / ಅತಿ

ಪ್ರಮುಖ ರಸ್ತೆಗಳ ಒಟ್ಟು 477.19 ಕಿಲೋಮೀಟರ್ ರಸ್ತೆಯನ್ನು ದುರಸ್ಥಿಗೊಳಿಸಲು ಹಾಗೂ ವಾರ್ಡ್ ಮಟ್ಟದ 1705.31 ಕಿಲೋಮೀಟರ್ ಉದ್ದದ ರಸ್ತೆಯನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ.

ಮತ್ತೊಂದು ಪ್ರಮುಖ ಅಂಶವೆಂದರೆ ಸರ್ಕಾರವು 110 ಹಳ್ಳಿಗಳ ಪ್ರದೇಶದಲ್ಲಿ ಬೆಂಗಳೂರು ಜಲಮಂಡಳಿಯಿಂದ ನೀರಿನ ಕೊಳವೆಗಳನ್ನು ಮತ್ತು ಒಳಚರಂಡಿ ಕೊಳವೆಗಳನ್ನು ಅಳವಡಿಸಲು ಕತ್ತರಿಸಿದ ರಸ್ತೆ ಭಾಗಗಳನ್ನು ಪುನರ್ ಸ್ಥಾಪನೆ ಮಾಡಲು ರೂ.1000.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿದ್ದು, ರಸ್ತೆ ಪುನರ್‌ಸ್ಥಾಪನೆ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

ವಾಹನ ದಟ್ಟಣೆ ಮತ್ತು ಅಕಾಲಿಕ ಮಳೆಯಿಂದ ರಸ್ತೆಯ ಕೆಲವು ಭಾಗಗಳಲ್ಲಿ ಉಂಟಾಗುತ್ತಿರುವ ರಸ್ತೆ ಗುಂಡಿಗಳನ್ನು ಮತ್ತು ಹಾಳಾದ ರಸ್ತೆ ಭಾಗಗಳನ್ನು ದುರಸ್ಥಿಗೊಳಿಸಲು ಮತ್ತು ರಸ್ತೆ ನಿರ್ವಹಣೆಯನ್ನು ನಿಗದಿತ ಅವಧಿಯಲ್ಲಿ ಕೈಗೆತ್ತಿಕೊಳ್ಳಲಾಗುತ್ತಿರುತ್ತದೆ.

ಮುಂದುವರೆದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಶಾಶ್ವತವಾಗಿ ಕೆಳಕಂಡ ನಿರ್ವಹಣಾ ವ್ಯವಸ್ಥೆಯನ್ನು ಕಲ್ಪಿಸಲಾಗಿರುತ್ತದೆ.

1. ಬಿಬಿಎಂಪಿ ತನ್ನ ಏಕೈಕ ಸ್ವಂತ ಡಾಂಬರು ಮಿಶ್ರಣ ಘಟಕದೊಂದಿಗೆ ಇನ್ನೂ ನಾಲ್ಕು ಪ್ರದೇಶಗಳಲ್ಲಿ ಬಾಡಿಗೆ ರೂಪದಲ್ಲಿ ಡಾಂಬರು ಮಿಶ್ರಣ ಘಟಕವನ್ನು ಪಡೆಯಲಾಗಿದ್ದು, ಗುತ್ತಿಗೆದಾರರಿಗೆ ಈಗಾಗಲೆ ಗುಂಡಿ ಮುಚ್ಚುವ ಕಾರ್ಯಾದೇಶವನ್ನು ನೀಡಲಾಗಿದ್ದು, ರಸ್ತೆ ಗುಂಡಿ ಮುಚ್ಚುವ ಕಾರ್ಯವು ಪ್ರಗತಿಯಲ್ಲಿರುತ್ತದೆ.
2. ಮಳೆಗಾಲದಲ್ಲಿ ಗುಂಡಿ ಮುಚ್ಚಲು ಅನುಕೂಲವಾಗುವಂತೆ Asphalt Cold Mix ತಯಾರಿಕ ತಂತ್ರಜ್ಞಾನದ ಬಿಡಿಭಾಗಗಳನ್ನು ಬಿಬಿಎಂಪಿಯ ಏಕೈಕ ಸ್ವಂತ ಡಾಂಬರು ಮಿಶ್ರಣ ಘಟಕಕ್ಕೆ ಜೋಡಣೆ ಮಾಡಲಾಗಿದ್ದು, ದಿನಾಂಕ: 22-09-2022 ರಂದು ಕಾರ್ಯಾದೇಶವನ್ನು ಮೆ॥ Infra Source Equipment & Materials LLP, Mumbai ಸಂಸ್ಥೆಗೆ ನೀಡಲಾಗಿದ್ದು, ಸದರಿ ಸಂಸ್ಥೆಯು ಘಟಕದಿಂದ Asphalt Cold Mix ಮಿಶ್ರಣವನ್ನು ತಯಾರಿಸುವ ಕೆಲಸವು ಪ್ರಗತಿಯಲ್ಲಿರುತ್ತದೆ.
3. "ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ ಯೋಜನೆ" ಯಡಿಯಲ್ಲಿ ಬೆಂಗಳೂರು ನಗರದ ಹಾಳಾದ ಮತ್ತು ಇತರೆ

| | | |
|---|---|---|
| | | ನಿರ್ವಹಣೆಗೆ ಯೋಗ್ಯವಾದ ರಸ್ತೆಗಳನ್ನು ಡಾಂಬರೀಕರಣ ಮಾಡುವ ಕ್ರಮ ಕೈಗೊಳ್ಳಲಾಗಿದ್ದು, ವಾರ್ಡ್‌ಮಟ್ಟದ ಹಾಗೂ ಆರ್ಟಿರಿಯಲ್ ಮತ್ತು ಸಬ್-ಆರ್ಟಿರಿಯಲ್ ರಸ್ತೆಗಳ ಮರುಡಾಂಬರೀಕರಣ ಯೋಜನೆಯನ್ನು ಕೈಗತ್ತಿಕೊಳ್ಳಲಾಗಿದೆ.<br>4. ವಾರ್ಡ್ ಮಟ್ಟದಲ್ಲಿ ಆದ್ಯತೆಯ ಮೇಲೆ Liquid Emulsion Drum ಗಳನ್ನು ವಿತರಿಸಲಾಗಿದ್ದು, ತ್ವರಿತವಾಗಿ ಸ್ಥಳದಲ್ಲಿಯೇ ಡಾಂಬರು ಮಿಶ್ರಣ ತಯಾರಿಸಿ ಸೂಕ್ಷ್ಮ ಮತ್ತು ಅಪಘಾತ ಸರಹದ್ದುಗಳಲ್ಲಿ ರಸ್ತೆ ಗುಂಡಿ ಮುಚ್ಚಲು ಕ್ರಮಕೈಗೊಳ್ಳಲಾಗಿರುತ್ತದೆ.<br><br>ಮೇಲ್ಕಂಡ ಎಲ್ಲಾ ಅಂಶಗಳಂತೆ ರಸ್ತೆ ಗುಂಡಿಗಳ ನಿರ್ವಹಣೆಯಲ್ಲಿ ಸರ್ಕಾರವು ದಿಟ್ಟಕ್ರಮಗಳನ್ನು ಕೈಗೊಂಡಿದ್ದು, ರಸ್ತೆ ಗುಂಡಿಗಳ ನಿರ್ವಹಣೆಯಲ್ಲಿ ಸರ್ಕಾರವು ಪದೇ ಪದೇ ವಿಫಲವಾಗಿದೆ ಎಂಬ ಪ್ರಶ್ನೆಯೆ ಉದ್ಭವಿಸುವುದಿಲ್ಲ. |
| ಉ) | ರಾಜ್ಯ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ರಸ್ತೆ ಗುಂಡಿಗಳನ್ನು ಮುಚ್ಚುವಂತೆ ನೀಡಿರುವ ನಿರ್ದೇಶನಗಳನ್ನು ಸರ್ಕಾರ ಪಾಲಿಸಲು ಕೈಗೊಂಡ ಕ್ರಮಗಳೇನು? | ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 42927/2015 ರಂತೆ ಸಾರ್ವಜನಿಕ ಹಿತಾಸಕ್ತಿ ದಾವೆಯನ್ನು ಹೂಡಲಾಗಿದ್ದು, ರಸ್ತೆ ಗುಂಡಿಗಳನ್ನು ಮುಚ್ಚುವ ಕುರಿತು ಹಲವಾರು ನಿರ್ದೇಶನಗಳನ್ನು ನೀಡಲಾಗಿದ್ದು, ಸದರಿ ನಿರ್ದೇಶನಗಳನ್ನು ಸರ್ಕಾರ ಹಾಗೂ ಬಿಬಿಎಂಪಿಯು ಚಾಚುತಪ್ಪದೇ ಪಾಲಿಸಿರುತ್ತದೆ. ಈ ನಿರ್ದೇಶನಗಳಂತೆ ರಸ್ತೆ ಗುಂಡಿಗಳನ್ನು ಮುಚ್ಚಲು ಸರ್ವ ಸಿದ್ಧತೆಯನ್ನು ಮಾಡಿಕೊಳ್ಳಲಾಗಿರುತ್ತದೆ.<br><br>ಮುಂದುವರೆದಂತೆ, ಮಾನ್ಯ ಉಚ್ಚ ನ್ಯಾಯಾಲಯದ ನಿರ್ದೇಶನದಂತೆ ರಸ್ತೆ ಗುಂಡಿಯಿಂದ ಅಪಘಾತವಾದ ಪಕ್ಷದಲ್ಲಿ ಸಂತ್ರಸ್ತರಿಗೆ (ಮರಣ ಹೊಂದಿದವರು ಮತ್ತು ಗಾಯಾಳುಗಳು) ಪರಿಹಾರವನ್ನು ಒದಗಿಸುವ ಕಾಯ್ದೆಯನ್ನು ಬಿಬಿಎಂಪಿ ಕಾಯ್ದೆಯಲ್ಲಿ ಅಳವಡಿಸಿಕೊಳ್ಳಲಾಗಿರುತ್ತದೆ.<br><br>ಸಾರ್ವಜನಿಕರ ಹಿತದೃಷ್ಟಿಯಿಂದ ಸಮರ್ಪಕ ಮೂಲಸೌಕರ್ಯ ಒದಗಿಸಿ, ಶಾಶ್ವತ ಪರಿಹಾರ ಒದಗಿಸುವುದರೊಂದಿಗೆ ಗುಂಡಿ ಮುಕ್ತಗೊಳಿಸುವ ನಿಟ್ಟಿನಲ್ಲಿ ಇಂಡಿಯನ್ ರೋಡ್ ಕಾಂಗ್ರೆಸ್ ಹಾಗೂ MORT&H ನ ವಿಶಿಷ್ಟ ವಿವರಣೆಯಂತೆ ಹಾಗೂ ವಿನ್ಯಾಸದಂತೆ ಗುಣಮಟ್ಟವನ್ನು ಕಾಯ್ದುಕೊಂಡು 'ರಸ್ತೆ ಗುಂಡಿ ಮುಚ್ಚುವ ಕ್ರಮವನ್ನು ಕೈಗೊಂಡಿರುತ್ತದೆ.<br><br>ಬಿಬಿಎಂಪಿ ವ್ಯಾಪ್ತಿಯ ಜಲಮಂಡಳಿ, ಬೆಸ್ಕಾಂ, ಬಿಎಸ್ಎನ್ಎಲ್, ಕೆಪಿಟಿಸಿಎಲ್ ಹಾಗೂ ಓಎಫ್‌ಸಿ |

| | | |
|---|---|---|
| | | ಸಂಸ್ಥೆಗಳೊಂದಿಗೆ ಸಮನ್ವಯ ಸಾಧಿಸಿಕೊಂಡು ರಸ್ತೆ ಅಗೆತದ ಪುನಃಶ್ಚೇತನವನ್ನು ಅನುಷ್ಠಾನಗೊಳಿಸಲಾಗುತ್ತಿದೆ ಹಾಗೂ ಮುಂದಿನ ದಿನಗಳಲ್ಲಿ ಸಂಭವಿಸಬಹುದಾದ ಉಪಯುಕ್ತತೆಗಳಿಗಾಗಿ ಸ್ಥಳಕ್ಕೆ ಅನುಗುಣವಾಗಿ ಬಫರ್ ಜೋನ್ ಹಾಗೂ ಕೊಳವೆಗಳ ಡಕ್ಟ್‌ಗಳನ್ನು ನಿರ್ಮಿಸಲಾಗುತ್ತಿದೆ. ಇದರಿಂದಾಗಿ ರಸ್ತೆಗಳ ಅಗೆತ ಹಾಗೂ ರಸ್ತೆ ಗುಂಡಿಗಳು ಆಗದಂತೆ ಕ್ರಮ ಕೈಗೊಳ್ಳಲಾಗುತ್ತಿದೆ.<br><br>ಅದಾಗ್ಯೂ ಯಾವುದೇ ರಸ್ತೆ ಗುಂಡಿ ಕಂಡುಬಂದಲ್ಲಿ ಅದನ್ನು ನಿಗಧಿತ ಅವಧಿಯಲ್ಲಿ ರಸ್ತೆ ಗುಂಡಿ ಮುಚ್ಚಲು ನೇಮಕಗೊಂಡಿರುವ ಸಂಸ್ಥೆಗಳಿಂದ ಗುಂಡಿ ಮುಚ್ಚುವ ಕ್ರಮವನ್ನು ಕ್ರಮಬದ್ಧಗೊಳಿಸಲಾಗಿರುತ್ತದೆ. ಮಳೆಗಾಲದಲ್ಲಿ ರಸ್ತೆ ಗುಂಡಿಯನ್ನು ಮುಚ್ಚಲು ಅನುಕೂಲವಾಗುವಂತೆ ಬಿಬಿಎಂಪಿ ವತಿಯಿಂದ ಸ್ಥಾಪಿಸಲಾಗಿರುವ ಬ್ಯಾಚ್ ಮಿಕ್ಸ್ ಪ್ಲ್ಯಾಂಟ್‌ನಲ್ಲಿ Cold Asphalt Mix ತಯಾರಿಸಲು ಅನುವು ಮಾಡಿಕೊಳ್ಳುವ ಕ್ರಮವನ್ನು ಜಾರಿ ಮಾಡಲಾಗಿರುತ್ತದೆ. |

ಸಂಖ್ಯೆ: ನಅಇ 98 ಎಂಎನ್‌ವೈ 2023 (ಇ)

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ

ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ. ಯು.ಬಿ.ವೆಂಕಟೇಶ್ ರವರ ಪ್ರಶ್ನೆ ಸಂಖ್ಯೆ:411

ಅನುಭಂದ-1

ಬಿಬಿಎಂಪಿ ವ್ಯಾಪ್ತಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಗುಂಡಿ ಮುಚ್ಚಲು ನೀಡಿರುವ ಅನುದಾನದ ಮತ್ತು ವೆಚ್ಚದ ವಿವರ

| ಕ್ರಮ ಸಂಖ್ಯೆ | ವಲಯ | ಕ್ಷೇತ್ರ | 2019-2020 ಸಾಲಿನಲ್ಲಿ | | 2020-2021 ಸಾಲಿನಲ್ಲಿ | | 2021-2022 ಸಾಲಿನಲ್ಲಿ | |
|---|---|---|---|---|---|---|---|---|
| | | | ಅನುದಾನದ ಮೊತ್ತ ರೂ.(ಲಕ್ಷ ಗಳಲ್ಲಿ) | ವೆಚ್ಚ ರೂ.(ಲಕ್ಷ ಗಳಲ್ಲಿ) | ಅನುದಾನದ ಮೊತ್ತ ರೂ.(ಲಕ್ಷ ಗಳಲ್ಲಿ) | ವೆಚ್ಚ ರೂ.(ಲಕ್ಷ ಗಳಲ್ಲಿ) | ಅನುದಾನದ ಮೊತ್ತ ರೂ.(ಲಕ್ಷ ಗಳಲ್ಲಿ) | ವೆಚ್ಚ ರೂ.(ಲಕ್ಷ ಗಳಲ್ಲಿ) |
| 1 | East | Shanthingara | 140.00 | 138.00 | 210.00 | 0.00 | 140.00 | 136.00 |
| | | Sarvagnanagara | 190.00 | 158.00 | 240.00 | 0.00 | 140.00 | 132.00 |
| | | Pulakeshinagara | 140.00 | 138.00 | 210.00 | 0.00 | 140.00 | 126.00 |
| | | Shivajinagara | 140.00 | 136.00 | 210.00 | 0.00 | 140.00 | 130.00 |
| | | CV Raman Nagara | 140.00 | 138.00 | 210.00 | 0.00 | 190.00 | 171.00 |
| | | Hebbala | 160.00 | 157.00 | 240.00 | 0.00 | 160.00 | 132.00 |
| | | **East - Total** | **910.00** | **865.00** | **1320.00** | **0.00** | **910.00** | **827.00** |
| 2 | West | Rajajinagara | 140.00 | 140.00 | 140.00 | 140.00 | 140.00 | 140.00 |
| | | Chamarajapet | 140.00 | 140.00 | 140.00 | 140.00 | 140.00 | 140.00 |
| | | Govindarajaunagara | 180.00 | 180.00 | 180.00 | 180.00 | 180.00 | 180.00 |
| | | Mahalakshmi Layout | 140.00 | 95.00 | 140.00 | 30.00 | 140.00 | 150.00 |
| | | Gandhinagara | 140.00 | 140 | 140.00 | 140 | 140 | 0 |
| | | Malleshwaram | 140.00 | 78.5 | 140 | 0 | 140 | 140 |
| | | **West - Total** | **880.00** | **773.50** | **880.00** | **630.00** | **880.00** | **750.00** |

[redacted]

| | | | | | | | | |
|---|---|---|---|---|---|---|---|---|
| 3 | South | Basavanagudi | 104.85 | 89.91 | 0 | 0 | 120 | 101.2[illegible] |
| | | BTM Layout | 87 | 53.78 | 0 | 0 | 160 | 93.[illegible] |
| | | Chikkapete | 114 | 101.4 | 0 | 0 | 140 | 109.4 |
| | | Jayanagara | 80 | 60 | 0 | 0 | 120 | 40 |
| | | Padhmanabhanagara | 185 | 97.74 | 155 | 41.72 | 160 | 41.56 |
| | | Vijayanagara | 40 | 38.81 | 0 | 0 | 160 | 150.5 |
| | | **South - Total** | **610.85** | **441.64** | **155** | **41.72** | **860** | **536.37** |
| 4 | Bommanahalli | Bommanahalli | 240 | 210 | 0 | 0 | 160 | 135 |
| | | Bangalore South | 240 | 240 | 0 | 0 | 160 | 160 |
| | | **Bommanahalli - Total** | **480** | **450** | **0** | **0** | **320** | **295** |
| 5 | Dasarahalli | Dasarahalli | 310 | 310 | 0 | 0 | 160 | 160 |
| | | **Dasarahalli - Total** | **310** | **310** | **0** | **0** | **160** | **160** |
| 6 | Mahadevapura | Mahadevapura | 160 | 160 | 210 | 210 | 145 | 145 |
| | | KR Puram | 35 | 15.34 | 104 | 62.43 | 190 | 75.92 |
| | | **Mahadevapura - Total** | **195** | **175.34** | **314** | **272.43** | **335** | **220.92** |
| 7 | RR Nagara | RR Nagara | 290 | 99.17 | 71 | 0 | 180 | 237.84 |
| | | Kengeri | 70 | 51.27 | 0 | 0 | 80 | 59.57 |
| | | **RR Nagar - Total** | **360** | **150.44** | **71** | **0** | **260** | **297.41** |
| 8 | Yalahanka | Yalahanka | 35 | 30.46 | | | 80 | 65.48 |
| | | Byatarayanapura | 225 | 198.96 | | | 193 | 156.69 |
| | | **Yelahanka - Total** | **260** | **229.42** | **0** | **0** | **273** | **222.17** |
| 9 | Road infra | SUBTOTAL | 1558.00 | 1196.68 | 1255.00 | 498.09 | 3007.00 | 2580.00 |
| | **GRAND TOTAL** | | **5563.85** | **4592.02** | **3995.00** | **1442.24** | **7005.00** | **5888.87** |

ಪ್ರಧಾನ ಅಭಿಯಂತರರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ